ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಈಗ ಇರುವ ಉತ್ತರ ಪಟ್ಟಿಯನ್ನಾದರೂ ಕೊಡಿಸಿ.

ಅಧ್ಯಕ್ಷರು :— ನಾಳೆ ಬರುವ ಪ್ರಶ್ನೆಗಳಿಗೆ ಉತ್ತರ ಪಟ್ಟಿಯನ್ನು ಮಾನ್ಯ ಸದಸ್ಯರೆಲ್ಲರಿಗೂ ಒದಗಿಸುವ ವ್ಯವಸ್ಥೆ ಮಾಡೋಣ.

1. ಪ್ರಶ್ನೋತ್ತರಗಳು

(ಅ) ತಡೆಹಿಡಿಯಲಾದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ.

543(5281) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅವನತಿ ಹೊಂದುತ್ತಿರುವುದು ಅಥವಾ ಬೆಳವಣಿಗೆ ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಸಣ್ಣ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದ ಮುಂದೆ ನಿರ್ದಿಷ್ಟ ಕಾರ್ಯಕ್ರಮಗಳಿದೆಯೇ? ಹಾಗಿದ್ದಲ್ಲಿ, ಅವು ಯಾವುವು?

ಶ್ರೀ ಎಸ್. ಆರ್. ಕಾಶಪ್ಪನವರು (ಸಣ್ಣ ಕೈಗಾರಿಕಾ ಸಚಿವರು) :—

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಬೆಳವಣಿಗೆ ಕುಂಠಿತಗೊಂಡಿರುವುದಿಲ್ಲ. ಅದಾಗ್ಯೂ ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿರುವುದು ಕಂಡುಬಂದಿದೆ.

ಆ) ರೋಗಗ್ರಸ್ಥವಾಗುತ್ತಿರುವ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಿ ಅವುಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡಲು ಪ್ರತ್ಯೇಕ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ನೀತಿಯನ್ನು ಮಾಡಲಾಗಿದೆ. ಅದರಂತೆ ರೋಗಗ್ರಸ್ಥ ಕೈಗಾರಿಕೆಗಳಿಗೆ ಯೋಜನಾವೆಚ್ಚದ ಶೇ.25ರಷ್ಟು ಗರಿಷ್ಠ 2.50 ಲಕ್ಷಗಳಿಗೆ ಮೀರದಂತೆ ಬಡ್ಡಿರಹಿತ ಬೀಜಧನ ಸಾಲ ಮಾರಾಟ ಬಾಡಿಯನ್ನು ಪಾವತಿಸುವ ಬಗ್ಗೆ ಅವದಿ ಮುಂದೂಡಿಕೆ ವಿದ್ಯುತ್ ಶುಲ್ಕ ಪಾವತಿ ಬಗ್ಗೆ ರಿಯಾಯಿತಿ, ಅಭಿವೃದ್ಧಿ ಸಾಲ ಬಾಕಿ ಪಾವತಿ ಬಗ್ಗೆ ಅವಧಿ ಮುಂದೂಡಿಕೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ.

ಇ) ರೋಗಗ್ರಸ್ಥವಾಗುತ್ತಿರುವ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಿ ಅವುಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡಲು ಪ್ರತ್ಯೇಕ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ನೀತಿಯನ್ನು ಮಾಡಲಾಗಿದೆ. ಅದರಂತೆ ರೋಗಗ್ರಸ್ಥ ಕೈಗಾರಿಕೆಗಳಿಗೆ ಯೋಜನಾ ವೆಚ್ಚದ ಶೇ.25ರಷ್ಟು ಗರಿಷ್ಠ 2.50 ಲಕ್ಷಗಳಿಗೆ ಮೀರದಂತೆ ಬಡ್ಡಿರಹಿತ ಬೀಜಧನ ಸಾಲ, ಮಾರಾಟ ಬಾಕಿಯನ್ನು ಪಾವತಿಸುವ ಬಗ್ಗೆ ಅವಧಿ ಮುಂದೂಡಿಕೆ ವಿದ್ಯುತ್ ಶುಲ್ಕ ಪಾವತಿ ಬಗ್ಗೆ ರಿಯಾಯಿತಿ ಅಭಿವೃದ್ಧಿ ಸಾಲ ಬಾಕಿ ಪಾವತಿ ಬಗ್ಗೆ ಅವಧಿ ಮುಂದೂಡಿಕೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ.

ಸಣ್ಣ ಪ್ರಮಾಣ ಕೈಗಾರಿಕೆಗಳಿಗೆ ಆಧುನೀಕರಣ ಮತ್ತು ತಾಂತ್ರಿಕ ಉನ್ನತೀಕರಣ ನಿಧಿ ಸ್ಥಾಪನೆ ಯೋಜನೆಯನ್ನು ದಿನಾಂಕ 27-10-2000ದ ಸರ್ಕಾರದ ಆದೇಶದಲ್ಲಿ ಅನುಮೋದಿಸಲಾಗಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸುವುದಕ್ಕೆ ಏನು ಮಾಡುತ್ತಿದ್ದೇವೆಂಬ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಈ ಸಣ್ಣ ಕೈಗಾರಿಕೆಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂದರೆ ಇದಕ್ಕೆ ಕೋರ್ಟ್ ಡಿಕ್ರೀ ಇರುವುದಿಲ್ಲ, ಎಕ್ಸಿಕ್ಯೂಷನ್ ಇರುವುದಿಲ್ಲ, ಇವರು ಕೊಟ್ಟಂತಹ ಮೆಷಿನರಿಗಳನ್ನೆಲ್ಲಾ ತೆಗೆದುಕೊಂಡು ಹೋಗುತ್ತಿದ್ದಾರೆ, ಇದಕ್ಕೆ ಬ್ಯಾಂಕ್‌ನವರು ಎಲ್ಲವನ್ನೂ ಕೊಟ್ಟಿರುತ್ತಾರೆ. without any Decree court order execution ಏನೂ ಇಲ್ಲದೇ ಇದೆಲ್ಲವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಮಾಡುತ್ತಿದ್ದೀರೆಂಬುದನ್ನು ತಿಳಿಸಬೇಕು ಮತ್ತೆ ಈ ವಿಷಯದ ಬಗ್ಗೆ ಅನೇಕ ಮೊಕದ್ದಮೆಗಳನ್ನು ಹಾಕಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಎಷ್ಟು ರೋಗಗ್ರಸ್ಥವಾಗಿರುವ ಕೈಗಾರಿಕೆಗಳು ಇವೆ? ತಾವು ಏನು ಇನ್ಸೆಂಟೀವ್ ಕೊಟ್ಟಿದ್ದೀರಿ? ಅದನ್ನು ಅವಾಯ್ಡ್ ಮಾಡುವುದಕ್ಕೆ ಏನು ಮಾಡಿದ್ದೀರಿ? ಇವತ್ತಿನ ದಿವಸ ಅನೇಕರು ಕೈಗಾರಿಕೆಗಳನ್ನು ಮುಚ್ಚಿದ್ದಾರೆ. ಅದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳು ರೋಗಗ್ರಸ್ಥವಾಗುತ್ತಿರುವುದು ನಿಜ, ಇದನ್ನು ಪುನಶ್ಚೇತನಗೊಳಿಸಲು, ನಾವು ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಇದಕ್ಕಾಗಿ ಶೇಕಡಾ ಎಂಟೂವರೆ ಪರ್ಸೆಂಟ್ ಬಡ್ಡಿಯಲ್ಲಿ ತಾಂತ್ರಿಕತೆಯ ಉನ್ನತೀಕರಣಕ್ಕಾಗಿ ಅವರಿಗೆ 5 ಲಕ್ಷ ರೂಪಾಯಿಗಳನ್ನು ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ, ಹಾಗೂ ಕೆ.ಇ.ಬಿ, ಇನ್ನಿತರ ಸವಲತ್ತುಗಳನ್ನು ಪಾವತಿ ಮಾಡುವಂಥಾದ್ದನ್ನು ಮಾಡಿದ್ದೇವೆ. ಇದರ ಬಗ್ಗೆ ಸಮಗ್ರವಾದ ವರದಿಯನ್ನು ಈಗ ಕೇಳಿದ್ದೇವೆ, ಇನ್ನು ಒಂದು ತಿಂಗಳಿನಲ್ಲಿ ಈ ಎಲ್ಲಾ ವರದಿಯನ್ನು ತರಿಸಿಕೊಂಡು ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ರೋಗಗ್ರಸ್ಥ ಕೈಗಾರಿಕೆಗಳು ಇವೆ?

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೆ, ನಮಗೆ ಇದುವರೆಗೂ ಆರ್.ಬಿ.ಐ.ನಿಂದ ಲಭ್ಯವಾಗಿರುವ ಮಾಹಿತಿಗಳ ಪ್ರಕಾರ 5,300 ಕೈಗಾರಿಕೆಗಳು ರೋಗಗ್ರಸ್ಥವಾಗಿವೆ ಎಂದು ನಮ್ಮ ಗಮನಕ್ಕೆ ಬಂದಿದೆ. ಈ ಟಿಕ್ಸ್‌ಟಾಪ್ ಪ್ರಕಾರ ಸುಮಾರು ನಲವತ್ತೊಂಭತ್ತು ಪರ್ಸೆಂಟ್‌ಗೂ ಮಿಕ್ಕ ಕೈಗಾರಿಕೆಗಳು ರೋಗಗ್ರಸ್ಥವಾಗಿವೆ. ಇವುಗಳನ್ನು ಪುನಶ್ಚೇತನಗೊಳಿಸಿದರೆ ಉಳಿಯುವಂತಹ ಕೈಗಾರಿಕೆಗಳು ಯಾವುವು ಇವೆ, ಅಂತಹ ಕೈಗಾರಿಕೆಗಳನ್ನು ಮಾತ್ರ ಪುನಶ್ಚೇತನ ಮಾಡುವಂತಹ ವಿಚಾರವನ್ನು ನಾವು ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಸರ್ಕಾರದವರು ಕೊಟ್ಟಿರುವಂತಹ ಉತ್ತರದಲ್ಲಿ ಕೆಲವೊಂದಕ್ಕೆ ಕ್ಲಿಯಾರಿಟಿ ಇಲ್ಲ. ಮಾನ್ಯ ಮಂತ್ರಿಯವರು ರೋಗಗ್ರಸ್ಥ ಕೈಗಾರಿಕೆಗಳ ಬಗ್ಗೆ ಹೇಳಿದರು. ರಾಜ್ಯದಲ್ಲಿ ಶೇಕಡ 50ಕ್ಕೂ ಹೆಚ್ಚಿಗೆ ರೋಗಗ್ರಸ್ಥ ಕೈಗಾರಿಕೆಗಳು ಇವೆ ತಾವು ಬಿಜಾಪುರದಲ್ಲಿ ಏನು ಸ್ಟೇಟ್ಮೆಂಟ್ ಕೊಟ್ಟಿದ್ದೀರಿ ಅದರಲ್ಲಿ ಬಂದಿದೆ. ಇವು ರೋಗಗ್ರಸ್ಥವಾಗುವಂಥಾದ್ದಕ್ಕೆ ಮತ್ತೊಂದು ಕಾರಣವಿದೆ. ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಏನು ಇವೆ, ಇವುಗಳು ಏನು ಉತ್ಪಾದನೆಯನ್ನು ಮಾಡುತ್ತವೆ, ಅದನ್ನು ಸರ್ಕಾರದ ಏಜೆನ್ಸಿಯವರು ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅದು ಕೆ.ಆರ್.ಟಿ.ಸಿ. ಇರಬಹುದು, ಕೆ.ಪಿ.ಟಿ.ಸಿ.ಎಲ್. ಇರಬಹುದು, ಅಥವಾ ಮತ್ತೊಂದು ಇರಬಹುದು. ಈಗ ಸರ್ಕಾರದ ಏಜೆನ್ಸಿಗಳು ಏನು ಇವೆ, ಅವು ಯಾವುದೇ ಮಾಲನ್ನು ತೆಗೆದುಕೊಳ್ಳುತ್ತಿಲ್ಲ, ಮತ್ತೆ ನಿವೇಶನಗಳು, ಕೈಗಾರಿಕಾ ಶೆಡ್‌ಗಳು ಬಹಳ ದುಬಾರಿಯಾಗಿವೆ. ಇದರ ಹೊರೆಯನ್ನು ಸಣ್ಣ ಕೈಗಾರಿಕೆಗಳು ತಡೆದುಕೊಳ್ಳುವುದಕ್ಕಾಗುತ್ತಿಲ್ಲ. ಅವರಿಗೆ ಇದರ ಬಗ್ಗೆ ಏನು ಅನುಕೂಲವನ್ನು ಮಾಡುಕೊಡುತ್ತಿರಾ? ಮತ್ತೊಂದು ವಿಚಾರವೇನೆಂದರೆ ತಮಿಳುನಾಡಿನಲ್ಲಿ ಪರ್ಚೇಸ್ ಬಗ್ಗೆ ಒಳ್ಳೆಯ ಯೋಜನೆ ಇದೆ. ಅಲ್ಲಿ ಸಣ್ಣ ಕೈಗಾರಿಕೆಗಳು ಏನು ಉತ್ಪಾದನೆಯನ್ನು ಮಾಡುತ್ತೇವೆ ಅದನ್ನು ಅದೇ ರಾಜ್ಯದವರು ತೆಗೆದುಕೊಳ್ಳುವ ಮಾದರಿ ಯೋಜನೆ ಇದೆ. ಆ ರೀತಿಯಲ್ಲಿ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತಿರಾ? ಇನ್ನು ಸಣ್ಣ ಕೈಗಾರಿಕೆಗಳ ಪ್ರಾಧಿಕಾರಿಗಳು, ಸಂಬಂಧಪಟ್ಟ ಮಂತ್ರಿಯವರು, ಮಾನ್ಯ ಮುಖ್ಯಮಂತ್ರಿಯವರು ಎಲ್ಲರೂ ಕುಳಿತು ಮೂರು ತಿಂಗಳುಗಳ ಹಿಂದೆ ಒಂದು ಮೀಟಿಂಗ್ ಮಾಡಿದ್ದೀರಿ. ಆಗ ಕೆಲವೊಂದು ರೆಸಲ್ಯೂಶನ್ಸ್ ಪಾಸ್ ಮಾಡಿದ್ದೀರಿ. ಅವುಗಳಲ್ಲಿ ಒಂದೂ ಕೂಡ ಇಂಪ್ಲಿಮೆಂಟ್ ಆಗಿಲ್ಲ. ಇದರ ಬಗ್ಗೆ ಗಂಭೀರವಾದ ರೀತಿಯಲ್ಲಿ ಚಿಂತನೆ ಮಾಡುತ್ತಿಲ್ಲ. ತಾವು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಬಯಸುತ್ತೇನೆ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ಗಂಭೀರವಾದಂತಹ ರೀತಿಯಲ್ಲಿ ಚಿಂತನೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಪೂರಕವಾಗಿ ಏನೂ ಒಂದು

ನಿರ್ಣಯಗಳನ್ನು ಕೈಗೊಂಡವೋ ಅವುಗಳಲ್ಲಿ ಬಹಳಷ್ಟು ಅನುಷ್ಠಾನಕ್ಕೆ ಬಂದಿದೆ. ಇನ್ನು ಕೆಲವೊಂದು ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ನಾವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ಇನ್ನು ನಾನು ಬಿಜಾಪುರದಲ್ಲಿ ಏನು ಹೇಳಿದ್ದೇನೆ, ಅದು ನಿಜ. ಅಲ್ಲಿರುವಂತಹ ಎಲ್ಲಾ ಕೈಗಾರಿಕೆಗಳು ರೋಗಗ್ರಸ್ಥವಾಗಿರುವಂಥಾದ್ದಕ್ಕೆ ಕಾರಣವೇನೆಂದರೆ ಅಲ್ಲಿರುವಂತಹ ಬಹಳಷ್ಟು ಕೈಗಾರಿಕೆಗಳು ಆಯಿಲ್ ಇಂಡಸ್ಟ್ರಿಗಳಾಗಿರುವುದರಿಂದ ಮತ್ತೆ ಪಾಮ್ ಆಯಿಲ್ ಹೊರಗಡೆಯಿಂದ ಬರುತ್ತಿರುವುದರಿಂದ ಇವತ್ತಿನ ದಿವಸ ಬಹಳಷ್ಟು ಆಯಿಲ್ ಇಂಡಸ್ಟ್ರಿಗಳು ರೋಗಗ್ರಸ್ಥವಾಗಿವೆ. ಇವತ್ತು ಶೇಕಡ 50ರಷ್ಟು ಇಂಡಸ್ಟ್ರಿಗಳು ರೋಗಗ್ರಸ್ಥವಾಗಿವೆ ಎಂದು ಹೇಳಿದ್ದೀರಿ. ಅದರಲ್ಲಿ ಎರಡೂವರೆ ಲಕ್ಷ ಕೈಗಾರಿಕೆಗಳು ರಿಜಿಸ್ಟ್ರೇಷನ್ ಆಗಿವೆ, ಇನ್ನು ಎರಡೂವರೆ ಲಕ್ಷ ನಾನ್ ರಿಜಿಸ್ಟ್ರೇಷನ್ ಕೈಗಾರಿಕೆಗಳು ಇವೆ. ಒಟ್ಟು 5 ಲಕ್ಷ ಇಂಡಸ್ಟ್ರಿಗಳು ಇವೆ. ನಮ್ಮ ಟೆಕ್ಸ್‌ಟಾದ್ ವರದಿ ಪ್ರಕಾರ ಈಗಾಗಲೇ ಶೇಕಡ 49 ಎಂದು ತಮಗೆ ಹೇಳಿದ್ದೇನೆ. ಏಕ ಗವಾಕ್ಷಿ ಸಂಸ್ಥೆಯಿಂದ ಇವತ್ತಿನ ದಿವಸ ಯಾವ ಕೈಗಾರಿಕೆಗಳನ್ನು ಪುನಶ್ಚೇತನ ಮಾಡಬೇಕೆಂದು ಶಿಫಾರಸ್ಸು ಬರುತ್ತಿದೆಯೋ ಆ ಕೈಗಾರಿಕೆಗಳಿಗೆ ಸೀಮಿತವಾಗಿ ತಾಂತ್ರಿಕತೆಯ ಉನ್ನತೀಕರಣಕ್ಕೆ ಸಹಾಯ ಮಾಡುತ್ತಿದ್ದೇವೆ. ಅವುಗಳಿಗೆ ಶೇಕಡಾ ಎಂಟೂವರೆಗೂ ಕಡಿಮೆ ಬಡ್ಡಿಯಲ್ಲಿ ಹಣವನ್ನು ಕೊಡುತ್ತಿದ್ದೇವೆ, ಇನ್ನು ಉಳಿದಂತಹ ಕೆಲವು ಸವಲತ್ತುಗಳನ್ನು ಕೊಡಬೇಕೆಂಬ ವಿಚಾರವೂ ಇದೆ. ಇನ್ನು ತಾವು ಮಾರ್ಕೆಟ್ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈ ವಿಷಯ ಹಿಂದೆ ಸದನದಲ್ಲೂ ಕೂಡ ಪ್ರಸ್ತಾಪವಾಗಿದೆ. ಕೆಲವು ಹಿರಿಯ ಸದಸ್ಯರುಗಳು ಪ್ರಶ್ನೆಗಳನ್ನು ಕೇಳಿದಾಗ ಅವರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ ಮತ್ತು ಈ ವಿಚಾರ ಸಚಿವ ಸಂಪುಟದ ಸಭೆಯಲ್ಲೂ ಸಹ ಚರ್ಚೆಯಾಗಿದೆ. ಅಲ್ಲಿ ಗುಣಮಟ್ಟವನ್ನು ಹೇಗೆ ಸುಧಾರಣೆ ಮಾಡಬೇಕು, ಎನ್ನುವುದಕ್ಕಾಗಿ ಜಿಲ್ಲಾ ಪಂಚಾಯತ್‌ಗಳು ಕೆಲಸ ಮಾಡುತ್ತಿವೆ. ಕೆಲವು ಕಡೆಗಳಲ್ಲಿ ಮಹಿಮಾಟು ನಡೆಸುವಾಗ ಈ ವಸ್ತುಗಳ ಗುಣಮಟ್ಟ ಸರಿಯಾಗಿಲ್ಲವೆಂದು, ಇನ್ನಿತರ ಕಾರಣಗಳಿಂದ ಬೇರೆ ಬೇರೆ ಕಡೆಗಳಲ್ಲಿ ಪರ್ಚೇಸ್ ಮಾಡುವಂಥಾದ್ದು ನಡೆಯುತ್ತಿವೆ. ಅದಕ್ಕಾಗಿ ಐ.ಎಸ್.ಒ-9000 ಸರ್ಟಿಫಿಕೇಟ್ ಪಡೆಯಬೇಕು, ಅದರ ಮೇಲೆ ಉತ್ತಮ ಗುಣಮಟ್ಟವನ್ನು ಸುಧಾರಣೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಕೆ.ಎಸ್.ಐ.ಎಂ.ಎಸ್.ಸಿ. ಯವರು ಸಣ್ಣ ಕೈಗಾರಿಕೆಗಳ ವಸ್ತುಗಳನ್ನು ತೆಗೆದುಕೊಳ್ಳುತ್ತಿಲ್ಲ, ಬೇರೆ ರಾಜ್ಯಗಳ ವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ತಾವು ದಯಮಾಡಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇವರು ಸಣ್ಣ ಕೈಗಾರಿಕೆಗಳ ವಸ್ತುಗಳನ್ನು ತೆಗೆದುಕೊಳ್ಳುತ್ತಿಲ್ಲ, ಎನ್‌ಕರೇಜ್ ಕೊಡುತ್ತಿಲ್ಲ, ನಮ್ಮ ಕೈಗಾರಿಕೆಗಳು ನಾಶವಾಗುತ್ತಿವೆ. ಇದರಿಂದ ಲಕ್ಷಾಂತರ ಜನರು ನಿರುದ್ಯೋಗಿಗಳಾಗುತ್ತಾರೆ. ಇದರ ಬಗ್ಗೆ ಗಂಭೀರವಾಗಿ ಚಿಂತನೆಯಾಗಬೇಕಾಗಿದೆ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದವರು ಹೇಳಿದಂತೆ ನಾವು ಇದನ್ನು ಗಮನದಲ್ಲಿಟ್ಟುಕೊಂಡು ಈ ಸಣ್ಣ ಕೈಗಾರಿಕೆಗಳು ಏನು ಉತ್ಪಾದನೆ ಮಾಡುತ್ತವೆ, ಇವುಗಳ ಮಾರ್ಕೆಟಿಂಗ್ ವಿಚಾರವಾಗಿ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ಈ ಕೈಗಾರಿಕೆಗಳು ರೋಗಗ್ರಸ್ಥವಾಗಿರುವುದಕ್ಕೆ ಕಾರಣವನ್ನು ಕಂಡುಕೊಂಡಿದ್ದೇವೆ. ಇವುಗಳ ಪುನಶ್ಚೇತನಗೊಳಿಸುವಂಥಾದ್ದಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಇವುಗಳಲ್ಲಿ ಯಾವುವು ಸರ್ವೇವಾಗುತ್ತವೆ, ಅವುಗಳ ವಿಚಾರವನ್ನು ಮಾತ್ರ ತೆಗೆದುಕೊಂಡಿದ್ದೇವೆ. ಇವರಿಗೆ ಐಎಸ್-9,000 ಸರ್ಟಿಫಿಕೇಟ್ ಕೊಡಿಸಿ, ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳುವಂತೆ ಮತ್ತು ಪುನಶ್ಚೇತನ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಸ್ಪಷ್ಟವಾದ ಸೂಚನೆಗಳನ್ನು ಕೊಟ್ಟಿದ್ದಾರೆ, ಇವರ ಆದೇಶದ ಪ್ರಕಾರ ಹಾಗೂ ಹಿರಿಯ ಸದಸ್ಯರ ಸಲಹೆ ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಮಾತನಾಡುವಂತಹ ಸಂದರ್ಭದಲ್ಲಿ ಐದು ಸಾವಿರ ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗಿವೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಕೈಗಾರಿಕೆಗಳು ಹತ್ತು ಜನರಿಗೆ ಉದ್ಯೋಗ ಕೊಟ್ಟರೂ ಇನ್ನು ಸರಾಸರಿ ಐವತ್ತು ಸಾವಿರ ಜನರು ನಿರುದ್ಯೋಗಿಗಳಾಗಿದ್ದಾರೆ. ಕೆಲವು ಕೈಗಾರಿಕೆಗಳು ಹುಟ್ಟುವುದರೊಳಗೆ ಸಾಯುತ್ತಿವೆ. ಇದಕ್ಕೆ ಕಾರಣವೇನೆಂದರೆ ಸರ್ಕಾರದ ಕೈಗಾರಿಕಾ ನೀತಿ. ಸರ್ಕಾರ ಇವರಿಗೆ ವಿಡ್ತ್ ಲೋನ್, ಸೀಡ್ ಮನಿಲೋನ್, ಸಬ್ಸಿಡಿ, ಯಾವುದನ್ನೂ ಸಮಯಕ್ಕೆ ಸರಿಯಾಗಿ ಕೊಡುತ್ತಿಲ್ಲ. ಇದನ್ನು ಬಿಡುಗಡೆ ಮಾಡುವಾಗ ಲಂಚ, ಭ್ರಷ್ಟಾಚಾರದ ಹಾವಳಿಯೂ ಇದೆ. ಸರ್ಕಾರ ಕೊಡುವ ಈ ಸವಲತ್ತುಗಳನ್ನು ಆವಲಂಬಿಸಿ ಸಣ್ಣ ಕೈಗಾರಿಕೆಗಳನ್ನು ಆರಂಭ ಮಾಡುವಂತಹ ಕೈಗಾರಿಕೋದ್ಯಮಿಗಳು, ಅಥವಾ ನಿರುದ್ಯೋಗಿ ಪದವೀಧರರು ಯಾರು ಇದ್ದಾರೋ, ಅವರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಸರ್ಕಾರ ಬೇರೆ ಏನಾದರೂ ವಿಧಾನವನ್ನು ಹುಡುಕುತ್ತದೆಯೇ? ಅವರಿಗೆ ಸಮಯಕ್ಕೆ ಸರಿಯಾಗಿ ಸಹಾಯಧನ ವಿತರಣೆ ಮಾಡುತ್ತಿರಾ? ಇನ್ನು ಉಳಿದಂತಹ ಕೈಗಾರಿಕೆಗಳನ್ನು ಉಳಿಸುವಂತಹ, ಮತ್ತು ಬಲಪಡಿಸುವಂಥಾದ್ದಕ್ಕೆ ಏನಾದರೂ ಚಿಂತನೆ ನಡೆಯುತ್ತಿದೆಯಾ?

ಶ್ರೀ ಎಸ್.ಆರ್. ಕಾಶಪ್ಪನವರ್ :— ಇದರಲ್ಲಿ ಭ್ರಷ್ಟಾಚಾರವೆನ್ನುವುದಕ್ಕೆ ಅವಕಾಶವೇ ಇಲ್ಲ. ಸಬ್ಸಿಡಿಯನ್ನು ಬಿಡುಗಡೆ ಮಾಡಲು ನಾವು ಕ್ಯೂ-ಸಿಸ್ಟಂ ಅನ್ನು ಅನುಸರಿಸುತ್ತಿದ್ದೇವೆ, ಹಾಗಾಗಿ ಇಲ್ಲಿ ಯಾರೂ ಹಸ್ತಕ್ಷೇಪ ಮಾಡುತ್ತಿಲ್ಲವೆನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಕೈಗಾರಿಕೆಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಯಾವುದು ಮತ್ತೆ ಉಳಿಯಲು ಸಾಧ್ಯವಿಲ್ಲವೋ ಅಂತಹವುಗಳನ್ನು ಪುನಶ್ಚೇತನಗೊಳಿಸಲು ಸಾಧ್ಯವಿಲ್ಲ. ಆ ಬಗ್ಗೆ ವರದಿಯನ್ನು ತರಿಸಿಕೊಂಡಾಗ, ಯಾವುದು ಉಳಿಯುತ್ತದೆಂದು ಗೊತ್ತಾಗುತ್ತದೆಯೋ ಅದಕ್ಕೆ ಮಾತ್ರ ನಾವು ಸಹಾಯ ಮಾಡುತ್ತೇವೆನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಗುಂಡಪ್ಪ ವಕೀಲ್ :— ಸನ್ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯನ್ನು 1982ರಲ್ಲಿ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವೆಂದು ಘೋಷಣೆ ಮಾಡಿ ಸುಮಾರು ಅಲ್ಲಿ 5,200 ಕೈಗಾರಿಕೆಗಳನ್ನು ತೆರೆದಿದ್ದಾರೆ. ಈಗ ಅವು ಸಂಪೂರ್ಣವಾಗಿ ಮುಚ್ಚಿವೆ. ಕೇವಲ 5-6 ಕೈಗಾರಿಕೆಗಳು ಮಾತ್ರ ಚಾಲನೆಯಲ್ಲಿವೆ. ಇದಕ್ಕೆ ನಾನಾ ಕಾರಣಗಳಿವೆ. ಸರ್ಕಾರದ ನಿರ್ಲಕ್ಷ್ಯ, ಸಕಾಲದಲ್ಲಿ ಸಬ್ಸಿಡಿ ಕೊಡಲಿಲ್ಲ, ವರ್ಕಿಂಗ್ ಕ್ಯಾಪಿಟಲ್ ಕೊಡಲಿಲ್ಲ, ಪ್ರೋತ್ಸಾಹವನ್ನು ಕೊಡಲಿಲ್ಲ; ಹೀಗಾಗಿ ಅಷ್ಟೊಂದು ಕೈಗಾರಿಕೆಗಳು ಇವತ್ತು ಮುಚ್ಚಿವೆ. ಆ ಭಾಗದ 5 ಜನ ಶಾಸಕರು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಮಾನ್ಯ ಮಂತ್ರಿಗಳ ಗಮನವನ್ನು ಈ ಬಗ್ಗೆ ಸೆಳೆದಿದ್ದೇವೆ, ಆದರೂ ಕೂಡ ಇಲ್ಲಿಯವರೆಗೆ ಸರ್ಕಾರ ಕ್ರಮವನ್ನು ತೆಗೆದುಕೊಂಡಿಲ್ಲ. ಈ ನಿಟ್ಟಿನಲ್ಲಿ ಹಲವಾರು ಸಂಘಸಂಸ್ಥೆಗಳು ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ; ಬೀದರ್ ಜಿಲ್ಲೆಯ ಅವಸ್ಥೆಯ ಬಗ್ಗೆ ಹೇಳಿದ್ದಾರೆ. ಸುಮಾರು 5,000 ಕೈಗಾರಿಕೆಗಳು ಮುಚ್ಚಿರುವುದರಿಂದ ೪೦,೦೦೦ ಜನ ನಿರುದ್ಯೋಗಿಗಳಾಗಿದ್ದಾರೆ, ಅಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ದಿಸೆಯಲ್ಲಿ ತಾವು ಏನು ಮಾಡಿದ್ದೀರಿ? ಏನು ಮಾಡಲಾಗಿದೆ? ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಿರೋ ಇಲ್ಲವೋ? ಮತ್ತೆ ಯಾರನ್ನಾದರೂ ನಾವು ಸಂಪರ್ಕಿಸಬೇಕೇ? ಈ ನಿಟ್ಟಿನಲ್ಲಿ ಮಾನ್ಯ ಮಂತ್ರಿಯವರು ಉತ್ತರವನ್ನು ಈ ಸದನದಲ್ಲಿ ಹೇಳಬೇಕೆಂದು ನಾನು ಬಯಸುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ :— ಮಾನ್ಯ ಅಧ್ಯಕ್ಷರೆ, ನನಗೊಂದು ಅನುಮಾನವಿದೆ ಈ ಕೈಗಾರಿಕೆಗಳವರು ಬ್ರಿಡ್ಜ್ ಲೋನ್, ಕ್ಯಾಪಿಟಲ್ ಲೋನ್ ಈ ರೀತಿಯಾಗಿ ಎಲ್ಲಾ ಸಾಲವನ್ನು ಪಡೆದ ನಂತರ 10 ವರ್ಷಗಳಾದ ಮೇಲೆ ಅವರೇ ರೋಗಗ್ರಸ್ಥ ಕೈಗಾರಿಕೆಗಳನ್ನಾಗಿ ಮಾಡುತ್ತಾರೆ ಅವರಿಗೆ ಬಂದ ಲಾಭದಲ್ಲಿ ಮತ್ತೊಂದು ಕಡೆ ಕೈಗಾರಿಕೆಯನ್ನು ಆರಂಭ ಮಾಡಿ ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ. ನನಗೆ ಗೊತ್ತಿರುವಂತೆ ಶೇಕಡ 100ಕ್ಕೆ 80ರಷ್ಟು ಕೈಗಾರಿಕೆಗಳು ಪ್ರಾಪರ್ಟಿ ತೆರಿಗೆಯನ್ನು ಕಟ್ಟುತ್ತಿಲ್ಲ. ಅವು ರೋಗಗ್ರಸ್ಥ ಕೈಗಾರಿಕಗಳೆಂದು ತಿಳಿದ ಮೇಲೆ ಯಾರು ಸಾಲವನ್ನು ಕೊಟ್ಟಿರುತ್ತಾರೆ ಅವರು ಅವುಗಳನ್ನು ಹರಾಜು ಮಾಡುತ್ತಾರೆ, ಆ ರೀತಿ ಮಾಡಿದ ಮೇಲೆ ಪಂಚಾಯಿತಿಗೆ ಏತಕ್ಕೆ ಪ್ರಾಪರ್ಟಿ ತೆರಿಗೆಯನ್ನು ಕಟ್ಟಿಲ್ಲ? ಆ ಬಗ್ಗೆ ಯಾರೂ ಚಿಂತನೆ ಮಾಡುವುದಿಲ್ಲ, ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಅವರು ವಂಚನೆ ಮಾಡುತ್ತಿದ್ದಾರೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಒಂದು ಕಡೆ ಆಸ್ತಿಯನ್ನು ಮಾರಿ, ಮತ್ತೊಂದು ಕಡೆ ಆಸ್ತಿ ಮಾಡಿಕೊಂಡ ಬಗ್ಗೆ ಏನಾದರೂ ತನಿಖೆ ಮಾಡಿ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ 234 ಕೈಗಾರಿಕೆಗಳು ಮುಚ್ಚಿವೆ, ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಅನಾಥರಾಗಿ ಅವರ ಬದುಕು ನಾವು ಬದುಕಿನ ಮಧ್ಯೆ ತೊಳಲಾಡುತ್ತಿದೆ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಕೆ.ಹೆಚ್. ಹನುಮೇಗೌಡ :— ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸಾಕಷ್ಟು ಪ್ರಕಟಣೆ ಕೊಟ್ಟರು, ಪ್ರೋತ್ಸಾಹ ಕೊಟ್ಟರು, ಎಷ್ಟೋ ಜನ ಆ ಕೈಗಾರಿಕೆಗಳನ್ನು ಆರಂಭಿಸಿದರು. 1980ರಲ್ಲಿ ಉಚಿತ ಶೆಡ್‌ಗೆ ಜಮೀನು, ಬಿಲ್ಡಿಂಗ್ ಎಲ್ಲಾ ಸೇರಿ ರೂಪಾಯಿ 75,000 ಖರ್ಚು ಬಿದ್ದಿದ್ದು, ಕೇವಲ 225 ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟರು. ಕೈಗಾರಿಕೆಗಳು ಮುಚ್ಚಿದಂತೆ ಆ ಮೊತ್ತವನ್ನು ಹೆಚ್ಚಿಗೆ ಮಾಡಿ ಒಂದು ತಿಂಗಳಿಗೆ ರೂಪಾಯಿ 4,000 ಆಗಿದೆ. ಕೊಂಡುಕೊಳ್ಳಲು ರೂಪಾಯಿ 75,000 ಮೆಚ್ಚವಾಗಿದೆ. ಆ ಶೆಡ್ ಕಳಪೆ ಮಟ್ಟದ ನಿರ್ಮಾಣವಾಗಿದ್ದು, ಇವತ್ತು 5 ಲಕ್ಷ ಎಂದು ಎಸ್ಟಿಮೇಟ್ ಮಾಡಿ ಶೇಕಡ 3ರಷ್ಟು ರಿಡಕ್ಷನ್ ಮಾಡಿ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಪಾವತಿಸಬೇಕೆಂದು ಹೇಳುತ್ತಾರೆ. ಕೊಂಡುಕೊಳ್ಳಲಾಗದಿದ್ದರೆ ತಿಂಗಳಿಗೆ ರೂಪಾಯಿ 4,000 ಬಾಡಿಗೆ ಕೊಡಿ, ಆಗದಿದ್ದರೆ ಖಾಲಿ ಮಾಡಿ ಎಂದು ಹೇಳುತ್ತಾರೆ. ಇದು ಇವರು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ವಿಧಾನವಾಗಿದೆ. ಪಿಡಬ್ಲ್ಯುಡಿ ಷೆಡ್ಯೂಲ್ ರೇಟ್ ವರ್ಷಕ್ಕೆ ಶೇಕಡ 15-20ರಷ್ಟು ಹೆಚ್ಚಾಗುತ್ತದೆ, ಇವರದು ಶೇಕಡ 3ರಷ್ಟಿದೆ. ಅದನ್ನು ಹೇಗೆ ಸುಧಾರಣೆ ಮಾಡುತ್ತೀರೆನ್ನುವ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಎನ್. ಯೋಗೀಶ್‌ಭಟ್ :— ಸನ್ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆಗಳ ಸಂಘ ಮತ್ತು ಛೇಂಬರ್ ಆಫ್ ಕಾಮರ್ಸ್ ಇವರ ಜೊತೆಯಲ್ಲಿ ಕನಿಷ್ಟ ಪ್ರತಿ ಮೂರು ತಿಂಗಳಿಗೊಂದು ಸಾರಿ ಸಭೆ ನಡೆಸಿ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುವುದೇ? ಎರಡನೆಯದಾಗಿ, ಮೂರು ತಿಂಗಳು ಸಾಲದ ಕಂತುಗಳನ್ನು ಕಟ್ಟದಿದ್ದರೆ ಕೆಎಸ್‌ಎಫ್‌ಸಿಯವರು ಆ ಕೈಗಾರಿಕೆಗೆ ಬೀಗ ಹಾಕುತ್ತಾರೆ. ಕನಿಷ್ಟ ಬ್ಯಾಂಕ್ ರೀತಿಯಲ್ಲಿ ಕೆಎಸ್‌ಎಫ್‌ಸಿಯ ಮೂಲಕ ನೆರವನ್ನು ಕೊಡುವುದಕ್ಕೆ ಪರಿವರ್ತನೆ ಮಾಡಲು ಸಾಧ್ಯವೇ? ಕೊನೆಯದಾಗಿ, ಪ್ರತಿ ಜಿಲ್ಲೆಯಲ್ಲಿ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ವಿಶೇಷ ಘಟಕಗಳನ್ನು ಆರಂಭಿಸಿ ಉತ್ಪಾದನೆಯಾದ ವಸ್ತುಗಳಿಗೆ ಮಾರ್ಕೆಟ್ ವ್ಯವಸ್ಥೆ ಮಾಡಲಾಗುವುದೆ?

ಶ್ರೀ ವಿ. ಪಾಪಣ್ಣ :— ಸಣ್ಣ ಕೈಗಾರಿಕೆಗಳು ತಯಾರು ಮಾಡುವ ಉತ್ಪನ್ನಗಳಿಗೆ ಮಾರ್ಕೆಟಿಂಗ್ ಇದೆಯೋ ಇಲ್ಲವೋ ಎಂದು ನೋಡಿಕೊಂಡು ಅದರ ಆರಂಭಕ್ಕೆ ಅನುಮತಿಯನ್ನು ಕೊಡಬೇಕು. ಉದಾಹರಣೆಗೆ ಹೇಳುವುದಾದರೆ ಆಟೋಮೆಟಿಕ್ ಆಗಿ ವೈರ್‌ಲೆಸ್ ಮಾಡಿದರೆ ಕಲ್ಕತ್ತದಿಂದ ಕೆ.ಜಿ. 10 ರೂಪಾಯಿಗೆ ಬರುತ್ತಿದ್ದರೆ, ಸಣ್ಣ ಕೈಗಾರಿಕೆಯಿಂದ ಅದಕ್ಕೆ 20 ರೂಪಾಯಿಗಳು ಬೀಳುತ್ತದೆ. ಜಾಗ ಸಬ್ಸಿಡಿ ಹಣ ಪಡೆದುಕೊಳ್ಳಲು ಮಾತ್ರ ಸಣ್ಣ ಕೈಗಾರಿಕೆಗಳನ್ನು ಆರಂಭಿಸಲು ಅನುಮತಿ ಪಡೆದುಕೊಳ್ಳುತ್ತಾರೆ. ಸಣ್ಣ ಕೈಗಾರಿಕೆಗಳಲ್ಲಿ ಅಂತಹ ಉತ್ಪನ್ನಗಳಿಗೆ ಬೆಲೆ ಒಂದಕ್ಕೆ ಎರಡರಷ್ಟು ಇದ್ದರೂ ಕೂಡ ಇವರು ಅನುಮತಿ ಕೊಡುತ್ತಾರೆ, ಸಾಲ ಕೊಡುತ್ತಾರೆ, ಸಬ್ಸಿಡಿ ಕೊಡುತ್ತಾರೆ ಎಲ್ಲವನ್ನೂ ಕೊಡುತ್ತಾರೆ, ಇದೆಲ್ಲಾ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಹೇಳಿದಂತೆ ಹಣವನ್ನು ಲಪಟಾಯಿಸಲು ಇರುವ ಕಾರ್ಯಕ್ರಮವಾಗಿದೆ. ಕೈಗಾರಿಕೆ ಆರಂಭಿಸಲು ಅನುಮತಿ ಕೊಡುವಾಗಲೇ ಮಾರ್ಕೆಟಿಂಗ್ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡು ಕೊಡಬೇಕು.

ಶ್ರೀ ವಿ. ಕೃಷ್ಣಪ್ಪ :— ನನ್ನ ಕ್ಷೇತ್ರ ದೊಡ್ಡಬಳ್ಳಾಪುರದಲ್ಲಿ ಶೇಕಡ 75ರಷ್ಟು ಕೈಗಾರಿಕೆಗಳು ಮುಚ್ಚಿವೆ ಕೆಎಸ್ಎಫ್ಸಿ, ಬ್ಯಾಂಕ್ ಇತ್ಯಾದಿ ಕಡೆಗಳಲ್ಲಿ ಸಬ್ಸಿಡಿಗೋಸ್ಕರ ಸಾಲ ತೆಗೆದುಕೊಂಡು ಸಬ್ಸಿಡಿ ಬಂದ ಮೇಲೆ 6 ತಿಂಗಳು ಅಥವಾ ಒಂದು ವರ್ಷ ಕೈಗಾರಿಕೆಯನ್ನು ನಡೆಸಿ ಸಂಪೂರ್ಣವಾಗಿ ಕೈಗಾರಿಕೆಗಳನ್ನು ಮುಚ್ಚಿದ್ದಾರೆ. ಅಲ್ಲಿಗೆ ಕೆಲಸಕ್ಕೆ ಹೋಗುತ್ತಿದ್ದ ಕಾರ್ಮಿಕರ ಬಾಳು ಹಾಳು ಸಾಲ ಕೊಟ್ಟಿದ್ದು ಹೋಯಿತು. ಸಬ್ಸಿಡಿಯನ್ನು ತೆಗೆದುಕೊಂಡು, ಬೇರೆ ಕಡೆ ಆಸ್ತಿ ಮಾಡಿಕೊಂಡು ಕೇರಳ ಇತ್ಯಾದಿ ಕಡೆಯಿಂದ ಬಂದವರು ಮಜವಾಗಿ ಇದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್ :— ಮಾನ್ಯ ಮಂತ್ರಿಗಳು ಬಿಜಾಪುರಕ್ಕೆ ಬಂದಾಗ ಸಿಕ್ ಇಂಡಸ್ಟ್ರೀಸ್ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು, ಕನಿಷ್ಟ ಎರಡು ಕೋಟಿ ರೂಪಾಯಿಗಳ ನೆರವನ್ನು ನಬಾರ್ಡ್‌ನಿಂದ ತೆಗೆದುಕೊಂಡು ಯಾವುದು ಸಿಕ್ ಇಂಡಸ್ಟ್ರೀಸ್ ಇದ್ದಾವೋ ಅವುಗಳ ಪುನರಜ್ಜೀವನ ಮಾಡುತ್ತೇವೆನ್ನುವ ಮಾತನ್ನು ಹೇಳಿದರು. ಆ ರೀತಿ ಹೇಳಿ ಒಂದು ವರ್ಷವಾಯಿತು. ಇದು ಕಾರ್ಯರೂಪಕ್ಕೆ ಬರುತ್ತದೆಯೋ

11.30 ಎ.ಎಂ.

ಅರ್ಥ ಇಲ್ಲವೊ? ಎರಡನೆಯದಾಗಿ, ನನಗೆ ತಿಳಿದಮಟ್ಟಿಗೆ ಇನ್ನೂ 200 ಜನ ಕೈಗಾರಿಕೋದ್ಯಮಿಗಳು ಇಂಡಸ್ಟ್ರಿಯಲ್ ಸಬ್ಸಿಡಿ ಸಲುವಾಗಿ ಕಾಯುತ್ತಿದ್ದಾರೆ. ನೀವು ಆದ್ಯತೆ ಮೇಲೆ ಕೊಡುತ್ತೇವೆ ಎಂದು ಅಲ್ಲಿಂದ ಇಲ್ಲಿಂದ ಅಸಿಸ್ಟೆನ್ಸ್ ತೆಗೆದುಕೊಂಡು ಕೆಲವನ್ನು ಕ್ಲಿಯರ್ ಮಾಡಿದ್ದೀರಿ. ಇನ್ನೂ 200 ಜನರಿಗೆ ಅಸಿಸ್ಟೆನ್ಸ್ ಸಿಕ್ಕಿಲ್ಲ. ಅವರಿಗೆ ಅದನ್ನು ಯಾವಾಗ ಕೊಡುತ್ತೀರಿ ಎನ್ನುವ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರವು ಕಳೆದ ಒಂದು ತಿಂಗಳ ಹಿಂದೆ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸಾಕಷ್ಟು ರಿಯಾಯಿತಿಗಳನ್ನು ಮತ್ತು ಪ್ರೋತ್ಸಾಹಗಳನ್ನು ಘೋಷಣೆ ಮಾಡಿದೆ. ಕೇಂದ್ರ ಸರ್ಕಾರದ ಈ ಯೋಜನೆಯನ್ನು, ಇಲ್ಲಿಯ ಸಣ್ಣ ಕೈಗಾರಿಕೆಗಳಿಗೆ ಮತ್ತು ಸಣ್ಣ ಕೈಗಾರಿಕಾ ಸಂಘಗಳಿಗೆ ಸಮರ್ಪಕವಾಗಿ ತಿಳಿಸಲು ನಮ್ಮ ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಮಂತ್ರಿಗಳು ಯಾವ ಪ್ರಯತ್ನವನ್ನು ಮಾಡಿದ್ದಾರೆ? ಸಣ್ಣ ಕೈಗಾರಿಕೆಗಳ ಪುನಶ್ಚೇತನ ಕುರಿತಂತೆ ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಯಾವ ಪ್ರಸ್ತಾವನೆಗಳನ್ನು ಕಳುಹಿಸಿದೆ?

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೇ, ಸಾಲ ಕೊಟ್ಟಿರುವ ಸಂಸ್ಥೆಗಳವರು ಸಿ.ಕ್. ಇಂಡಸ್ಟ್ರೀಸ್ ಮೇಲೆ ಮಾಫಿಯಾ ಗ್ಯಾಂಗ್ ರೀತಿಯಲ್ಲಿ ಕಾರ್ಯಾಚರಣೆ ಮಾಡುತ್ತಿದ್ದಾರೆ. ಅವರು ಮಾಫಿಯಾ ಗ್ಯಾಂಗ್ ರೀತಿಯಲ್ಲಿ ಒಂದು ಗ್ಯಾಂಗ್‌ನ್ನು ಸಿದ್ಧ ಮಾಡಿದ್ದಾರೆ. ಅವರು ಕೋರ್ಟಿಗೆ ಹೋಗುವುದೂ ಇಲ್ಲ, ಅವರಿಗೆ ಕೋರ್ಟ್ ಡಿಕ್ರಿ ಬೇಕಾಗಿಲ್ಲ. ಈ ಗ್ಯಾಂಗ್‌ನವರನ್ನು ಕರೆದುಕೊಂಡು ಹೋಗುವುದು, ಸಾಮಾನು ತೆಗೆದು ಆಚೆಗೆ ಹಾಕುವುದು

ಮತ್ತು ಅವುಗಳನ್ನು ಸೇಲ್ ಮಾಡುವುದನ್ನು ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಇದು ಬಹಳ ದುರಾದೃಷ್ಟಕರವಾದುದು. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡಿರುವಿರಾ? ಇವತ್ತು ಅನೇಕ ಸ್ಮಾಲ್-ಸ್ಕೇಲ್ ಇಂಡಸ್ಟ್ರೀಗಳು ಕ್ಲೋಸ್ ಆಗಿವೆ. ಆದ್ದರಿಂದ, ಇದಕ್ಕೆ ಏನಾದರೊಂದು ಯೋಜನೆ ಮಾಡಿ ಸಣ್ಣ ಕೈಗಾರಿಕೆಗಳ ಪುನಶ್ಚೇತನ ಮಾಡಲು ಏನು ಮಾಡುತ್ತೀರಿ? ಇದುವರೆಗೂ ಏನನ್ನೂ ಮಾಡಿಲ್ಲ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೇ, ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಪ್ರದೇಶ ಎನ್ನತಕ್ಕಂಥ ವಿಷಯದಲ್ಲಿ ಇಡೀ ರಾಜ್ಯದಲ್ಲಿ ಏಕರೂಪದ ವ್ಯವಸ್ಥೆ ಇದೆ. ಅದಕ್ಕೆ ಆ ಜಿಲ್ಲೆ, ಈ ಜಿಲ್ಲೆ ಎಂದು ಪ್ರತ್ಯೇಕವಾದ ಯಾವುದೇ ರೀತಿಯ ನಿಯಮಾವಳಿಗಳು ಇಲ್ಲ. ಕೆ.ಎಸ್.ಎಫ್.ಸಿ.ಯವರು ಸಿಕ್ ಯೂನಿಟ್‌ಗಳನ್ನು ಸೀಜ್ ಮಾಡುವುದು ಮತ್ತು ಸೇಲ್ ಮಾಡುವ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ ಎಂದು ಬಹಳಷ್ಟು ಹಿರಿಯ ಸದಸ್ಯರು ಹೇಳಿರತಕ್ಕಂಥ ಚಿಂತನೆ ಮತ್ತು ಕಳಕಳಿ ನನಗೂ ಅರ್ಥವಾಗಿದೆ. ಆ ನಿಟ್ಟಿನಲ್ಲಿ ಈಗ ನಾವು ಅವರಿಗೆ ನೋಟೀಸ್ ನ್ನು ಕೊಟ್ಟು, ಅವರನ್ನು ಕರೆದು ಹೇಳಿದ್ದೇವೆ. ಕೆಲವರಿಗೆ ಬಡ್ಡಿಯನ್ನು ಮನ್ನಾ ಮಾಡಿ, ಒನ್ ಟೈಂ ಸೆಟ್ಲ್‌ಮೆಂಟ್ ಮೇಲೆ ಹಣವನ್ನು ತುಂಬಿಸಿಕೊಳ್ಳತಕ್ಕಂಥ ವ್ಯವಸ್ಥೆ ಈಗ ಅಲ್ಲಿ ನಡೆಯುತ್ತಿದೆ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಸುತ್ತಿದ್ದೇನೆ. ಅನೇಕ ಜನರಿಗೆ ಕೈಗಾರಿಕೆಗಳನ್ನು ಪ್ರಾರಂಭ ಮಾಡುವಾಗಲೇ ಬ್ಯಾಂಕುಗಳವರು ಇನ್ ವೆಸ್ಟ್‌ಮೆಂಟ್ ಲೋನ್ ಕೊಡುತ್ತಿಲ್ಲ, ಇದರಿಂದಾಗಿ ಪ್ರಾರಂಭದಲ್ಲೇ ಅನೇಕ ಕೈಗಾರಿಕೆಗಳು ಸಿಕ್ ಆಗುತ್ತಿವೆ. ಅದಕ್ಕಾಗಿ ಕೈಗಾರಿಕಾ ಇಲಾಖೆ ತನ್ನದೇ ಆದ ನೀತಿಯನ್ನು ಮಾಡಿ, ಇಂಥ ಕಡೆ, ಇಂಥ ಉದ್ದಿಮೆಗಳನ್ನು ಸ್ಥಾಪನೆ ಮಾಡಿದರೆ ಅವು ನಡೆಯುತ್ತವೆ ಎನ್ನುವ ನಿರ್ಧಾರ ಮಾಡಬೇಕು ಎಂದು ಹೇಳಿದರು. ಅಂಥ ಯಾವುದೇ ಜವಾಬ್ದಾರಿಯನ್ನು ಇಲಾಖೆ ತೆಗೆದುಕೊಳ್ಳುವಂಥ ಪ್ರಶ್ನೆ ಬರುವುದಿಲ್ಲ. ತಮ್ಮ ಪ್ರತಿಭೆ ಮತ್ತು ಉತ್ಸಾಹದಿಂದ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಮುಂದೆ ಬರುವವರಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸುವಂಥ ಕಾರ್ಯಕ್ರಮವನ್ನು ಮಾತ್ರ ಇಲಾಖೆ ಮಾಡುತ್ತಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಯಾವಯಾವ ಜಿಲ್ಲೆಯಲ್ಲಿ ಯಾವಯಾವ ರಾಮೆಟೀರಿಯಲ್ ಇದೆ, ಅದಕ್ಕೆ ಎಷ್ಟು ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡಬಹುದು ಅಥವಾ ಡಿಮ್ಯಾಂಡ್ ಯಾವುದಕ್ಕೆ ಇದೆ ಎಂದು ತೀರ್ಮಾನ ಮಾಡುವ ಬಗ್ಗೆ ಈವರೆಗೂ ಯಾವ ಕಾರ್ಯಕ್ರಮವೂ ಸರ್ಕಾರದ ಹಂತದಲ್ಲಿ ಇಲ್ಲ. ಹಿಂದೆ ನಮ್ಮ ಇಲಾಖೆಯಿಂದ ಮಾಡಿರತಕ್ಕಂಥ ಸಭೆಗಳಿಗೆ ಛೇಂಬರ್ ಆಫ್ ಕಾಮರ್ಸ್‌ರವರನ್ನು, ಕಾಸಿಯಾದವರನ್ನು, ಸ್ಥಳೀಯ ಸಂಘ ಸಂಸ್ಥೆಗಳವರನ್ನು ಹಾಗೂ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆದು, ಆ ಸಭೆಗಳಲ್ಲಿ ಮಾಡಿರುವ ಚಿಂತನೆಯಂತೆ ಸಮಗ್ರವಾಗಿರತಕ್ಕಂಥ ಒಂದು ವರದಿಯನ್ನು ಆದಷ್ಟು ಬೇಗ ಈ ಸದನದಲ್ಲಿ ಮಂಡಿಸಿ, ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡು ಮುಂದೆ ಅಂಥ ಕಾರ್ಯಕ್ರಮಗಳನ್ನು ರೂಪಿಸತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾವು ಕೇಳಿದ ಪ್ರಶ್ನೆಗೆ ಉತ್ತರವೇ ಬರಲಿಲ್ಲ. ಹಾಗಾದರೆ ನಾವು ಏಕೆ ಪ್ರಶ್ನೆ ಕೇಳಬೇಕು?

ಅಧ್ಯಕ್ಷರು :— ಸಮಗ್ರವಾದ ವರದಿಯನ್ನು ಇಲ್ಲಿ ಇಟ್ಟು ಮಾಡುತ್ತೇವೆ ಎಂದು ಅವರು ಹೇಳಿದ ಮೇಲೆ ಇನ್ನೇನಿದೆ? ಮುಂದೆ ಈ ಬಗ್ಗೆ ಪ್ರಶ್ನೆಗಳನ್ನು ಕೇಳಲು ಅವಕಾಶವಿಲ್ಲ. ಈಗ ಮುಂದಿನ ಪ್ರಶ್ನೆ.

ಪೌರಾಡಳಿತ ನಿರ್ದೇಶನಾಲಯದ ಕಾರ್ಯವ್ಯಾಪ್ತಿ.

550(5217) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೌರಾಡಳಿತ ನಿರ್ದೇಶನಾಲಯವು ಎಂದಿನಿಂದ ಪ್ರಾರಂಭಿಸಲಾಯಿತು. ಇದರ ಕಾರ್ಯವ್ಯಾಪ್ತಿಯ ವಿವರಗಳನ್ನು ನೀಡುವುದು?

ಆ) ಪೌರಾಡಳಿತ ಇಲಾಖೆಗೆ ವಿವಿಧ ಮೂಲಗಳಿಂದ ಬರುವ ಆದಾಯವೆಷ್ಟು?

ಇ) ಈ ಇಲಾಖೆಯನ್ನು ರದ್ದುಗೊಳಿಸಿ ಈ ಹಿಂದೆ ಇದ್ದಂತೆ ಆಯಾ ವಿಭಾಗಾಧಿಕಾರಿಗಳಿಗೆ ಇದರ ಕಾರ್ಯಭಾರವನ್ನು ವಹಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ ಕಾರಣಗಳೇನು? ಈ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) ಪೌರಾಡಳಿತ ರಾಜ್ಯ ಸಚಿವರ ಪರವಾಗಿ :—

ಅ) ಪೌರಾಡಳಿತ ನಿರ್ದೇಶನಾಲಯವು 1984 ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಜ್ಯದಲ್ಲಿರುವ 211 ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಮೇಲ್ವಿಚಾರಣೆ, ವಿವಿಧ ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ ಸ್ಥಳೀಯ ನಗರ ಸಂಸ್ಥೆಗಳಿಂದ ಅನುಷ್ಠಾನಗೊಳಿಸುವಿಕೆ ಮತ್ತು ಮೇಲುಸ್ತುವಾರಿ.

ಆ) ಪೌರಾಡಳಿತ ಇಲಾಖೆಗೆ ಯಾವುದೇ ನಿರ್ದಿಷ್ಟವಾದ ಆದಾಯದ ಮೂಲಗಳಿರುವುದಿಲ್ಲ. ಇದೊಂದು ಸಾರ್ವಜನಿಕ ಸೇವೆಯನ್ನು ಗುರಿಯಾಗಿರಿಸಿಕೊಂಡಿರುವ ಸರ್ಕಾರಿ ಇಲಾಖೆಯಾಗಿದ್ದು, ರಾಜ್ಯದ ಆಯವ್ಯಯದಲ್ಲಿ ನಿಗಧಿಗೊಳಿಸಲಾಗಿರುವ ಆಯವ್ಯಯದ ಅನುಸಾರ ಕಾರ್ಯ ನಿರ್ವಹಿಸುತ್ತಿದೆ.

ಇ) ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಗೊಳಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದೆ ಇರುವುದಿಲ್ಲ. ಪೌರಾಡಳಿತ ನಿರ್ದೇಶನಾಲಯಕ್ಕೆ ಮಂಜೂರಾದ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸುತ್ತಾ ಬದಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.